# ಪ್ರಶ್ನೆ:

# “ಪ್ರತಿಯೊಂದು ಸ್ಥಳಿಕ ಸಭೆಗೆ ದೇವರು ಯಾವ ಅಧಿಕಾರ ಕೊಟ್ಟನು?”

## ಉತ್ತರ:

ಇಬ್ಬರು ಕ್ರೈಸ್ತರು ಒಂದಾಗಿ ಕರ್ತನ ಭೋಜನ ಆಚರಿಸುವುದು ಹೊಸ ಒಡಂಬಡಿಕೆಯ ಸಭೆಯಾಗಿದೆ. ಕೆಲವು ಸಲ ಕೇವಲ ಒಬ್ಬ ಗಂಡ ಮತ್ತು ಒಬ್ಬ ಹೆಂಡತಿ (ಅಕ್ವಿಲ ಮತ್ತು ಪ್ರಿಸಿಲ್ಲಳಂತೆ) “ತಮ್ಮ ಮನೆಯಲ್ಲಿ ಸಭೆ” ಆಗಿದ್ದಾರೆ (ರೋಮಾಪುರ 16:5; 1 ಕೊರಿಂಥ 16:19; ಕೊಲೊಸ್ಸೆ 4:15; ನೋಡಿರಿ ಫಿಲೆಮೋನ 2) “ಇಬ್ಬರಾಗಲಿ ಮೂವರಾಗಲಿ,” ಕರ್ತನ ಹೆಸರಿನಲ್ಲಿ, ಕೂಡಿಬರುವಾಗ ಆತನು “ಅವರ ಮಧ್ಯದಲ್ಲಿರುವನು” (ಮತ್ತಾಯ 18:20) ಎಂಬ ದೈವಿಕ ಭರವಸೆಯಲ್ಲಿ ಅವರು ಆನಂದಿಸುವರು.

ಕರ್ತನ ಸಭೆಯ ಒಂದು ಮಂಡಲಿಯು ಕೆಂಟಕ್ಕಿಯ ನಿಕೋಲಸ್‌ವಿಲ್ಲೆಯಲ್ಲಿ, ಒಬ್ಬ ಕ್ರೈಸ್ತ ಮಹಿಳೆಯು, ಪಟ್ಟಣದಲ್ಲಿ ಇನ್ನೊಬ್ಬ ಕ್ರೈಸ್ತ ಮಹಿಳೆಯನ್ನು ಕರ್ತನ ದಿನದ ಆರಾಧನೆಗಾಗಿ ತನ್ನ ಮನೆಗೆ ಆಹ್ವಾನಿಸಿದಾಗ ಪ್ರಾರಂಭವಾಯಿತು. ಅವರಿಬ್ಬರು ಒಂದಾಗಿ ಹಾಡಿದರು, ಪ್ರಾರ್ಥನೆ ಮಾಡಿದರು, ಪರಿಶುದ್ಧ ಬರಹಗಳನ್ನು ಓದಿದರು, ಕರ್ತನ ಭೋಜನ ಆಚರಿಸಿದರು ಮತ್ತು ವಾರ ವಾರವೂ ತಮ್ಮಿಬ್ಬರ ಎರಡು ಕಾಣಿಕೆಗ ಳನ್ನು ಕೂಡಿಸಿ ಇಟ್ಟರು. ಆ ಇಬ್ಬರು ಮಹಿಳೆಯರ ಭಕ್ತಿಯು ನಿಕೊಲಸ್‌ವಿಲ್ಲೆಯಲ್ಲಿ ಇಂದಿನ ವಿಶಾಲವಾದ, ಮಿಶನ್ - ಭಾವನೆಯುಳ್ಳ ಸಭೆಯ ಪ್ರಾರಂಭವಾಗಿತ್ತು.

ಯಾವುದೇ ಹೊಸ ಒಡಂಬಡಿಕೆಯ ಸಭೆಗೆ ಅದು ಬೋಧಿಸುವಂಥದ್ದರ ಬಗ್ಗೆ ಯಾವುದೇ “ಹಾಗೆ-ಹೇಳು” ಎಂಬುದು ಇರಲಿಲ್ಲ, ಯಾಕಂದರೆ ಅದರ ಬೋಧ ನೆಯು “ಅಪೊಸ್ತಲರ ಬೋಧನೆಗೆ” ನಿರ್ಬಂಧಿಸಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 2:42). ಅಪೊಸ್ತಲರ ಬೋಧನೆಯು “ಪರಲೋಕದಲ್ಲಿ” ಪ್ರಾರಂಭವಾಯಿತು ಮತ್ತು ಹನ್ನೆರಡು ಜನ ಅಪೊಸ್ತಲರು ಹೇಳುವವರು ಮಾತ್ರವೇ ಆದರು. “ಭೂಲೋಕದಲ್ಲಿ ನೀವು ಏನೇನು ಕಟ್ಟುತ್ತಿರೋ ಅದು ಪರಲೋಕದಲ್ಲಿಯು ಕಟ್ಟಿರುವುದು [ಗ್ರೀಕ: *estai dedemena*]” ಮತ್ತು ನೀವು ಭೂಲೋಕದಲ್ಲಿ ನೀವು ಏನೇನುಬಿಚ್ಚುತ್ತಿರೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು [ಗ್ರೀಕ: *estai lelumena*] ಎಂದು ಯೇಸು ಹೇಳಿ ದನು (ಮತ್ತಾಯ 18:18).

ಒಬ್ಬರಿಂದೊಬ್ಬರಿಗೆ ಅವರು ಹೇಳುವಂಥದ್ದು ಬಹಳ ಮಹತ್ವದ್ದಾಗಿದ್ದು, ಅವರು “ಕ್ರಿಸ್ತನಿಗಾಗಿ ರಾಯಭಾರಿಗಳು” ಎಂದು ಕರೆಯಲ್ಪಟ್ಟರು (2 ಕೊರಿಂಥ 5:20). ಅವರು “ಹನ್ನೆರಡು ಸಿಂಹಾಸನಗಳ ಮೇಲೆ” ಕುಳಿತವರಂತೆ ವಿವರಿಸಲ್ಪಟ್ಟರು

(ಮತ್ತಾಯ 19:28).

ಹನ್ನೆರಡು ಜನರ ಅಧಿಕಾರವು ಕ್ರಿ.ಶ. 30ರಲ್ಲಿ ಪಂಚಾಶತ್ತಮದ ದಿನದಂದು ಯೆರೂಸಲೇಮಿನಲ್ಲಿ ಪ್ರಾರಂಭವಾಯಿತು. ಅದು ಹನ್ನೆರಡು ಜನರ ಮರಣದ ವರೆಗೆ ಮಾತ್ರವಲ್ಲ "ಯುಗದ ಸಮಾಪ್ತಿಯ ವರೆಗೆ" (ಮತ್ತಾಯ 28:20) ವಿಸ್ತರಿಸಲ್ಪಟ್ಟಿತು.

ಯಾವುದೇ ಬೋಧನೆಯ ಬಗ್ಗೆ ಪ್ರತಿಯೊಬ್ಬ ಕ್ರೈಸ್ತನು "ಸತ್ಯದ ಆತ್ಮನ ಮತ್ತು ಸುಳ್ಳಿನ ಆತ್ಮದ" ಮಧ್ಯದಲ್ಲಿ ಹೇಗೆ ಭಿನ್ನತೆ ಮಾಡಬೇಕೆಂಬುದನ್ನು ತಿಳಿದಿದ್ದಾನೆ. "ಅದು ಅಪೊಸ್ತಲರಿಂದ ಬಂದದ್ದೋ?" ಎಂದು ಅವನು ಕೇಳಬೇಕು. "ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ; ದೇವರಿಂದ ಹುಟ್ಟಿದವನು ನಮ್ಮ ಮಾತನ್ನು ಕೇಳುವದಿಲ್ಲ" (1 ಯೋಹಾನ 4:6) ಎಂದು ಒಬ್ಬ ಅಪೊಸ್ತಲನು ಬರೆದಿದ್ದಾನೆ.

"ಈ ಸೂತ್ರಕ್ಕೆ (ಗ್ರೀಕ: *kanon*, ಅಪೊಸ್ತಲತನದ "ಸೂತ್ರ") ಸರಿಯಾಗಿ ನಡೆಯುವವರೆಲ್ಲರಿಗೆ ಅಂದರೆ ದೇವರ ಇಸ್ರಾಯೇಲ್ಯರಿಗೆ ಶಾಂತಿಯೂ ಕರುಣೆಯೂ ಆಗಲಿ" (ಗಲಾತ್ಯ 6:16) ಎಂದು ಪೌಲನು ಹೇಳಿದನು. ಹಿರಿಯರೊಂದಿಗೆ ಇಲ್ಲವೇ ಹಿರಿಯರು ಇಲ್ಲದ ಒಂದು ಸಭೆಯು ಎಚ್ಚರಿಕೆಯಿಂದ ಇರಬೇಕೆಂದು ಹೇಳಲ್ಪಟ್ಟಿದೆ, ಅದರಿಂದ ಅಪೊಸ್ತಲಿಕ ವಲ್ಲದ ಬೋಧನೆಯು ಸಭೆಯೊಳಗೆ ತರಲ್ಪಡಬಾರದು. "ಅದೇ ಪ್ರಕಾರ ನಿಮ್ಮಲ್ಲಿಯೂ ಸಳ್ಳು ಬೋಧಕರು ಇರುವರು" (2 ಪೇತ್ರ 2:1) ಎಂದು ಪೇತ್ರನು ಎಚ್ಚರಿಸಿದ್ದಾನೆ. ಆ ಕಾರಣದಿಂದ ಪೌಲನು ಹೀಗೆ ಬರೆದನು: "ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟು ಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ" (ರೋಮಾಪುರ 16:17).

ಪ್ರತಿಯೊಂದು ಸಭೆಗೆ ತನ್ನ ಸ್ವಂತ ವ್ಯವಹಾರಗಳನ್ನು ನೋಡಿಕೊಳ್ಳಲಿಕ್ಕೆ, ಸ್ವಾಯತ್ತತೆಯಿಂದ ಇರಲಿಕ್ಕೆ ಮತ್ತು ಸ್ವಂತ - ಆಡಳಿತೆ ಮಾಡಿಕೊಳ್ಳಲಿಕ್ಕೆ ಅಪೊಸ್ತಲಿಕ ಅಧಿಕಾರವಿರುತ್ತದೆ. ಹಿರಿಯರಿರುವದಕ್ಕಿಂತ ಮೊದಲೇ ಯೆರೂಸಲೇಮಿನ ಸಭೆಯಲ್ಲಿ ಸ್ವಯಂ ಆಡಳಿತೆಯ ತತ್ವವನ್ನು ಅಪೊಸ್ತಲರು ಗುರುತಿಸಿದ್ದರು. ಅವಸರದ ಸಮಯ ಬಂದಿತು, ದಯಾಕಾರ್ಯದ ಸಮಿತಿಯನ್ನು ನೇಮಕ ಮಾಡಬೇಕಾಯಿತ್ತು. ಹನ್ನೆರಡು ಜನ ಸುವಾರ್ತಿಕರು (ಹನ್ನೆರಡು ಜನ ಅಪೊಸ್ತಲರು) ಹಾಜರಿದ್ದರೂ ಅವರು ಸಭೆಯ ಮೇಲೆ ಆಡಳಿತೆಗಾರರಾಗಿರುವೆವೆಂದು ಯೋಚಿಸಲಿಲ್ಲ. ಸ್ಥಳಿಕ ಸ್ವಾಯತ್ತತೆಯನ್ನು ಅವರು ಗೌರವಿಸಿದರು.

"ಶಿಷ್ಯರು ಮಂಡಳಿಗೆ" ಅವರ ಪ್ರೇರೇಪಿತ ಆಜ್ಞೆಯು ಸಮಿತಿಗೆ ಜನರನ್ನು "ಆಯ್ಕೆ ಮಾಡಿಕೊಳ್ಳಬೇಕು" ಎಂದಿತ್ತು (ಗ್ರೀಕ: *episkeptomai,* "ಆಯ್ದುಕೋ" ಎಂದರ್ಥ). ಆ ಮೇಲೆ ಹನ್ನೆರಡು ಜನ ಸುವಾರ್ತಿಕರು "ಈ ಕಾರ್ಯಕ್ಕಾಗಿ" ಆಯ್ಕೆ ಯಾಗಿದ್ದವರನ್ನು ನೇಮಕ ಮಾಡುವರು (ಗ್ರೀಕ: *kathistemi*, ಅರ್ಥ "ಮೇಲ್ವಿಚಾರಣೆಯಲ್ಲಿ ಇಡು") (ಅಪೊಸ್ತಲರ ಕೃತ್ಯಗಳು 6:2, 3).

"ಅನಭಿಷಿಕ್ತ ಸದಸ್ಯರು" (ಇಂದು ತಪ್ಪಾಗಿ ಕರೆಯಲ್ಪಟ್ಟಂತೆ) ಆಯ್ಕೆಯನ್ನು ಮಾಡಿದರು. ಅವರು ಹೇಗೆ ಆಯ್ಕೆ ಮಾಡಿದರು ಎಂಬುದು ದಾಖಲೆ ಮಾಡಲ್ಪಟ್ಟಿಲ್ಲ. ಮತ ಚಲಾಯಿಸುವದರಿಂದಾಗಲೀ, ಇಲ್ಲವೇ ಬೇರೆ ರೀತಿಯಿಂದಾಗಲಿ, ಅವರು ಹೊಸ ಒಡಂಬಡಿಕೆಯ ಸಭೆಯ ಸ್ವಯಂ - ಆಡಳಿತಾ ತತ್ವವನ್ನು ಅವರು ರೂಢಿಸುತ್ತಿದ್ದರು.

ಲುಸ್ತ್ರ, ಲುಕವೋನ್ಯ ಮತ್ತು ಅಂತಿಯೋಕ್ಯದಲ್ಲಿಯ ಸಭೆಗಳಲ್ಲಿ ಇಬ್ಬರು ಸುವಾರ್ತಿಕರು - ಪೌಲ ಮತ್ತು ಬಾರ್ನಬರು - "ಪ್ರತಿಯೊಂದು ಸಭೆಯಲ್ಲಿ ಅವರಿಗಾಗಿ ಹಿರಿಯರನ್ನು" "ಪ್ರತಿಷ್ಠಿಸಿದರು" (KJV), ಇಲ್ಲವೇ "ನೇಮಿಸಿದರು" (ASV) (ಅಪೊಸ್ತಲರ

ಕೃತ್ಯಗಳು 14:23). ಹಿರಿಯರು ಪೌಲನಿಂದಾಗಲೀ, ಬಾರ್ನಬನಿಂದಾಗಲೀ ಆಯ್ಕೆ ಮಾಡಲ್ಪಟ್ಟಿರಲಿಲ್ಲ ಆದರೆ ಅವರಿಂದ ನೇಮಿಸಲ್ಪಟ್ಟಿದ್ದರು. ಒಬ್ಬನ ಹೆಸರಿಗೆ ಒಪ್ಪಿಗೆಯನ್ನು ಸೂಚಿಸಲು ಕೈಗಳನ್ನು ಮೇಲಕ್ಕೆತ್ತುವದನ್ನು ಸೂಚಿಸುವ, *cheirotoneo* (*cheir*, "ಕೈಯನ್ನು," ಮತ್ತು *teino,* "ಮುಂದೆಚಾಚು") ಎಂಬ ಪದವನ್ನು ಲೂಕನು ಉಪಯೋಗಿಸಿದ್ದರಿಂದ ಇದು ಸ್ಪಷ್ಟವಾಗಿದೆ. ಹಾಗಾದರೆ ಸಭೆಯಿಂದ ಆಯ್ಕೆಯು "ಮತ ಚಲಾಯಿಸುವದರಿಂದ" ಆಯಿತು.

ಸದಸ್ಯರು ಆಯ್ಕೆ ಮಾಡಿಕೊಳ್ಳುವದರಿಂದ ಇದ್ದ ಸ್ಥಳಿಕ ಸ್ವಯಂ - ಆಳ್ವಿಕೆಯನ್ನು ಪೌಲ ಮತ್ತು ಬಾರ್ನಬರು ಗೌರವಿಸಿದರೆಂದು ಲೂಕನ ಪ್ರೇರಿತ ಸಂದೇಶವು ತೋರಿಸುತ್ತದೆ. ಅನಂತರದಲ್ಲಿ ಇಬ್ಬರು ಸಂದರ್ಶಕ - ಸುವಾರ್ತಿಕರು ಆಯ್ಕೆ ಯಾದವರನ್ನು ಹಿರಿಯರಾಗಿ ನೇಮಿಸಿದರು.

ಅದೇ ರೀತಿಯಲ್ಲಿ, ತೀತನು, ಕ್ರೇತ - ದ್ವೀಪದಲ್ಲಿಯ ಸಭೆಗಳನ್ನು ಸಂದರ್ಶಿಸುತ್ತಿದ್ದ ಸುವಾರ್ತಿಕನು, ಹಿರಿಯ ತನಕ್ಕಾಗಿ ಜನರನ್ನು "ಆಯ್ಕೆ ಮಾಡಲು" ಪೌಲನಿಂದ ಅಪ್ಪಣೆಯನ್ನು ಹೊಂದಿಕೊಳ್ಳಲಿಲ್ಲ (ಗ್ರೀಕ: *episkeptomai*). ಅವನು ಅವರನ್ನು "ನೇಮಿಸಬೇಕಾಗಿತ್ತು" ಇಲ್ಲವೇ "ಪ್ರತಿಷ್ಠಿಸಬೇಕಾಗಿತ್ತು" (ಗ್ರೀಕ: *kathistemi*) (ತೀತ 1:5).

ದಯಾಕಾರ್ಯದ ಸಮಿತಿಗಾಗಿ ಸದಸ್ಯರನ್ನು ನೇಮಿಸುವದರಲ್ಲಿ ಯೆರೂಸಲೇಮಿನಲ್ಲಿ ಅಪೊಸ್ತಲರು ಉಪಯೋಗಿಸಿದ ಅದೇ ಗ್ರೀಕ ಪದವನ್ನು ಪೌಲನು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 6:2, 3). ಈ ಮಾದರಿಯು ಅನುಸರಿಸಲ್ಪಟ್ಟಿದ್ದರೆ, ಕ್ರೇತದ ಸಭೆಗಳಲ್ಲಿ ಸ್ಥಳಿಕ ಸದಸ್ಯರು ಹಿರಿಯರಾಗುವವರನ್ನು ಆಯ್ಕೆಮಾಡಿದರು, ಮತ್ತು ಆಗ ತೀತನು ಅವರನ್ನು ಅವರ ಕೆಲಸಕ್ಕೆ ನೇಮಿಸಿದನು. ತೀತನಂಥ ಸಂದರ್ಶಕರು ಅವರನ್ನು ಹೆಸರಿಸುವದಕ್ಕಿಂತ ಹೆಚ್ಚಾಗಿ, ಸ್ಥಳಿಕ ಸದಸ್ಯರು ತಾವು ಚೆನ್ನಾಗಿ ತಿಳಿದಿರುವ ಜನರ ಮಧ್ಯದೊಳಗಿಂದ ಆಯ್ಕೆಮಾಡಿಕೊಳ್ಳುವದು ಅರ್ಥಗರ್ಭಿತವಾದದ್ದಾಗಿರುತ್ತದೆ.

ಹಿರಿಯರಿಲ್ಲದ ಸಭೆಯು "ಸುವಾರ್ತಿಕನ ಮೇಲ್ವಿಚಾರಣೆಯಲ್ಲಿ" ಇರಬೇಕು ಎಂಬ ಬೋಧನೆಯಲ್ಲಿ ಇರುವ ತಪ್ಪನ್ನು ಮೇಲಿನ ಉದಾಹರಣೆಗಳು ತೋರಿಸುತ್ತವೆ. ಬೈಬಲಿನ ಪ್ರಕಾರವಾಗಿ ಸುವಾರ್ತಿಕರಿಗೆ ಅಧಿಕಾರವಿರುವದಿಲ್ಲ. ಅವರು ಮಾಡಬೇಕಾದದ್ದು ಅಪೊಸ್ತಲರ ಬೋಧನೆಯನ್ನು ಪುನಃ ಪ್ರಸಂಗಿಸುವುದು.

ಕ್ರೇತ - ದ್ವೀಪದಲ್ಲಿ ತೀತನಿಂದ ಮಾಡಲ್ಪಟ್ಟ ಪ್ರಸಂಗಿಸುವಿಕೆಯು "ಎಲ್ಲಾ ಅಧಿಕಾರದೊಂದಿಗೆ ಇತ್ತು" ಎಂದು ಪೌಲನು ಹೇಳಿದ್ದರಿಂದ (ತೀತ 2:15), ಆ ದ್ವೀಪದಲ್ಲಿಯ ಎಲ್ಲಾ ಸಭೆಗಳ ಮೇಲೆ ತೀತನು ಇಡಲ್ಪಟ್ಟಿದ್ದನೆಂದು ಕೆಲವರು ತಿಳಿಯುತ್ತಾರೆ. ಒಬ್ಬ ಸುವಾರ್ತಿಕನಿಗೆ "ಎಲ್ಲಾ ಅಧಿಕಾರವು" ಇರುವ ಒಂದೇ ಮಾರ್ಗವು, ಅಂದರೆ, ಅವನು ಬಿದ್ದುಹೋಗದ ಬೋಧಕನಾಗಿರುವ ಒಂದೇ ಮಾರ್ಗವು, ತನ್ನ ಮೇಲೆ ಅಪೊಸ್ತಲನ ಹಸ್ತಗಳು ಇಡಲ್ಪಟ್ಟಿರುವುದು (ನೋಡಿರಿ ಅಪೊಸ್ತಲರ ಕೃತ್ಯಗಳು 8:18).

ಸುವಾರ್ತಿಕನಾದ ತಿಮೋಥೆಯನ ಮೇಲೆ ತನ್ನ ಹಸ್ತಗಳನ್ನಿಟ್ಟಿರುವದನ್ನು ನಾವು ತಿಳಿದದ್ದರಿಂದ (2 ತಿಮೊಥೆ 1:6), ತೀತನ ಮೇಲೆ ತನ್ನ ಹಸ್ತಗಳನ್ನಿಡದೇ ಅವನನ್ನು ಕ್ರೇತದ ಸಭೆಗಳಲ್ಲಿ ಬಿಟ್ಟನೆಂದು ಯೋಚಿಸುವದು ಅಕಾರಣವಾದದ್ದಾಗಿದೆ. ತೀತನಿಗೆ "ಎಲ್ಲಾ ಅಧಿಕಾರವು" ಪೌಲನಿಂದ ಅದ್ಭುತಕರವಾದ ಹಸ್ತವನ್ನು - ಇಡುವುದು ಇಲ್ಲದೇ ಇದ್ದರೆ ಅಸಾಧ್ಯವಾದದ್ದಾಗುತ್ತಿತ್ತು.

ಹಿರಿಯರು ನೇಮಿಸಲ್ಪಟ್ಟನಂತರ, ಸ್ಥಳಿಕ ಸಭೆಯಲ್ಲಿ ಮೂಲದಲ್ಲಿ ಇಡಲ್ಪಟ್ಟ ಅಧಿಕಾರವು ಇನ್ನೂ ಸ್ಥಳಿಕ ಸಭೆಯಲ್ಲಿ ಇರುತ್ತದೆ. ಅದರಂತೆಯೇ, ತನ್ನ ಸ್ವಂತ

ಹಿರಿಯರನ್ನು ಆಯ್ಕೆಮಾಡುವ ಸಭೆಗಾಗಿರುವ ಅಧಿಕಾರವು ಅಪನಂಬಿಗಸ್ತರನ್ನು ಹೊರಗೆ ಹಾಕುವ ಅಧಿಕಾರವನ್ನೂ ಒಳಗೊಂಡಿರುತ್ತದೆ.

"... ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು" ಎಂದು ಪೌಲನು ಎಫೆಸದ ಹಿರಿಯರನ್ನು ಎಚ್ಚರಿಸಿದನು (ಅಪೊಸ್ತಲರ ಕೃತ್ಯಗಳು 20:29, 30). "ಒಬ್ಬ ಸಭೆಯ ಹಿರಿಯನ ಮೇಲೆ ದೂರು" "ಇಬ್ಬರು ಇಲ್ಲವೇ ಮೂವರು ಸಾಕ್ಷಿಇಂದ ತರಲ್ಪಟ್ಟಾಗ" ಆ ಹಿರಿಯನು "ಎಲ್ಲರ ಮುಂದೆ ಗದರಿಸಲ್ಪಡಬೇಕು" (1 ತಿಮೊಥೆ 5:19, 20; NIV).

ಅಪನಂಬಿಗಸ್ತ ಹಿರಿಯನು ತಳ್ಳಲ್ಪಡಲಾರನು ಎಂದು ಹೇಳುವುದರಲ್ಲಿ ಯಾವುದೇ ಅರ್ಥವಿರುವದಿಲ್ಲ - ನಿಶ್ಚಯವಾಗಿಯೂ, ಒಬ್ಬ ಮನುಷ್ಯನನ್ನು ನಾಯಕತ್ವದೊಳಗೆ ಇಡುವಂಥ ಅಧಿಕಾರವುಳ್ಳ ಸಭೆಗೆ ಅವನನ್ನು ಹೊರಗೆ ಹಾಕಲು ಅಧಿಕಾರವೂ ಇರುತ್ತದೆ.

ಪ್ರತಿಯೊಂದು ಸ್ಥಳಿಕ ಸಭೆಯಲ್ಲಿ, ಹಿರಿಯರು ನೇಮಿಸಲ್ಪಟ್ಟಿರಲಿ, ನೇಮಿಸಲ್ಪಡದೇ ಇರಲಿ, ಕೊಡಲ್ಪಟ್ಟ ಸ್ವಯಂ ಆಡಳಿತೆಯು "ದುಷ್ಟ ಮನುಷ್ಯನನ್ನು ತಮ್ಮ ಅನ್ಯೋನ್ಯತೆಯಿಂದ ಹೊರಗೆ ಹಾಕಲು" "ಕೂಡಿಬರುವದಕ್ಕೆ" ಸದಸ್ಯರಿಗೆ ಅಪ್ಪಣೆ ಕೊಡುತ್ತದೆ (1 ಕೊರಿಂಥ 5:4, 13). ಕ್ರೈಸ್ತರು "ಅಕ್ರಮವಾಗಿ ನಡೆಯುವ ಸಹೋದರನಿಗೆ ದೂರವಾಗಿರಬೇಕು" ಎಂದು ಹೇಳಲ್ಪಟ್ಟಿದ್ದಾರೆ (2 ಥೆಸಲೊನೀಕ 3:6).

ಅದರಂತೆಯೇ, ದಿನದಿನದ ಸಭೆಯ ವ್ಯವಹಾರಗಳು, ಅಪೊಸ್ತಲರ ಬೋಧನೆಗೆ ಸರಿಯಾದವುಗಳಾಗಿರುವವರೆಗೆ, ಸ್ಥಳಿಕ ಸಭೆಯಿಂದ ಮಾತ್ರವೇ ತೀರ್ಮಾನಿಸಲ್ಪಡುತ್ತವೆ. ಅಪೊಸ್ತಲರ ಬೋಧನೆಯು ಸಭೆಯಾಗಿ ಕೂಡಿಬರುವದನ್ನು ಸ್ಪಷ್ಟಪಡಿಸುತ್ತದೆ (ಇಬ್ರಿಯ 10:25), ಆದರೆ ಆ ಕೂಡಿಬರುವಿಕೆಯು ಯಾರಾದರ ಮನೆಯಲ್ಲಿ, ಬಾಡಿಗೆ ಸಭಾಂಗಣದಲ್ಲಿ ಇಲ್ಲವೇ ಸಭಾ ಕಟ್ಟಡದಲ್ಲಿ ಆಗಬೇಕೆಂದು ಸ್ಪಷ್ಟಪಡಿಸಿರುವದಿಲ್ಲ. ಸ್ಥಳಿಕ ಸದಸ್ಯರು ಸ್ಥಳವನ್ನು ನಿರ್ಣಯಿಸುವರು.

ಅಪೊಸ್ತಲರ ಬೋಧನೆಯು "ಒಬ್ಬರಿಗೊಬ್ಬರು" ಮತ್ತು "ದೇವರಿಗೆ" "ಆತ್ಮಿಕ ಸಂಗೀತಗಳನ್ನು" ಹಾಡುವದನ್ನು ಸ್ಪಷ್ಟಪಡಿಸುತ್ತದೆ (ಕೊಲೊಸ್ಸೆ 3:16). ಯಾವ ಹಾಡಿನ ಪುಸ್ತಕ ಉಪಯೋಗಿಸಬೇಕೆಂದು ಮತ್ತು ಯಾರು ಹಾಡುವಿಕೆಯನ್ನು ನಡಿಸಬೇಕು ಎಂಬುದು ಸ್ಥಳಿಕವಾದ ತೀರ್ಮಾನವಾಗಿತ್ತು.

ಅಪೊಸ್ತಲರ ಬೋಧನೆಯು ಪರಿಶುದ್ಧ ಬರಹದ ಓದುವಿಕೆಯನ್ನು (ಕೊಲೊಸ್ಸೆ 4:16; 1 ಥೆಸಲೊನೀಕ 5:27) ಮತ್ತು ಪರಸ್ಪರ ಭಕ್ತಿ ವೃದ್ಧಿಯನ್ನು ಸ್ಪಷ್ಟ ಪಡಿಸುತ್ತದೆ (1 ಥೆಸಲೊನೀಕ 5:11). ಹೀಗೆ ನಮ್ಮ ಕ್ರೈಸ್ತ ಕೂಟಗಳಲ್ಲಿ ಈ ಚಟುವಟಿಕೆಗಳನ್ನು ಕೂಡಿಸಿಕೊಳ್ಳುವುದು ಅವಶ್ಯವಾಗಿದೆ, ಆದರೆ ಕೂಟಗಳಲ್ಲಿ ಈ ಚಟುವಟಿಕೆಗಳು ಎಷ್ಟು ಸಮಯದವರೆಗೆ ಇರಬೇಕೆಂಬುದು ಸ್ಥಳಿಕ ಸಭೆಯ ನಿರ್ಣಯಕ್ಕೆ ಬಿಟ್ಟಿರುತ್ತದೆ.

ಪ್ರತಿಯೊಬ್ಬ ಕ್ರೈಸ್ತನಿಂದ ಅವನು "ನಿರ್ಣಯಿಸಿಕೊಂಡಂತೆ" "ವಾರದ ಮೊದಲನೆಯ ದಿನದಂದು" ಕಾಣಿಕೆ ಕೊಡಲ್ಪಡುವುದು ಅಪೊಸ್ತಲರ ಬೋಧನೆಯಲ್ಲಿ ವಿವರಿಸಲ್ಪಟ್ಟಿತ್ತು (1 ಕೊರಿಂಥ 16:1, 2). ಅದಲ್ಲದೇ, ವಿಶೇಷ ಸಂಗ್ರಹಿಸುವಿಕೆಯ ಬಗ್ಗೆ ಅನುಮೋದಿತ ಉದಾಹರಣೆಯನ್ನು ಕಂಡುಕೊಳ್ಳುತ್ತೇವೆ (ಅಪೊಸ್ತಲರ ಕೃತ್ಯಗಳು 11:27-30). ಈ ಸಂಗ್ರಹಿಸುವಿಕೆಗಳು, ಅಪೊಸ್ತಲರ ಸಮಯದಲ್ಲಿ, ವಿನೋದಕ್ಕಾಗಿರಲಿಲ್ಲ, ಆದರೆ ಎರಡು ತಿಳಿದ ಉದ್ದೇಶಗಳಿಗಾಗಿ ಇದ್ದವು: ಧರ್ಮಕಾರ್ಯಗಳಿಗಾಗಿ (ಅಪೊಸ್ತಲರ ಕೃತ್ಯಗಳು 24:17; ರೋಮಾಪುರ 15:25; 2 ಕೊರಿಂಥ 8:1-5; ಗಲಾತ್ಯ 2:10) ಮತ್ತು; ಸುವಾರ್ತೆಯನ್ನು ಪ್ರಸಗಿಸುವದಕ್ಕಾಗಿ (1 ಕೊರಿಂಥ 9:14; ಫಿಲಿಪ್ಪಿ 4:14-16).

ಕರ್ತನ ಭೋಜನ ಆಚರಿಸುವುದು ಅಪೊಸ್ತಲರ ಬೋಧನೆಗಳಲ್ಲಿ ಒಂದಾಗಿತ್ತು, ಆದರೆ ಅದು ಎಷ್ಟು ಸಲ ಆಚರಿಸಬೇಕೆಂಬುದು ಹೇಳಲ್ಪಟ್ಟಿರಲಿಲ್ಲ. ಹಾಗಿದ್ದರೂ, ಮನ್ನಣೆ ಹೊಂದಿದ ಉದಾಹರಣೆಯು (ಅಪೊಸ್ತಲನು ಹಾಜರಿರುವದರೊಂದಿಗೆ) "ರೊಟ್ಟಿ ಮುರಿಯಲು" "ವಾರದ ಮೊದಲನೆಯ ದಿನ" ಸಭೆಯು ಕೂಡಿಬರುವಂಥದ್ದು ಇತ್ತು (ಅಪೊಸ್ತಲರ ಕೃತ್ಯಗಳು 20:7). ಜಾಣ ಕ್ರೈಸ್ತರು ಇಂದು ಅದನ್ನು ಮಾಡುವರು.

ಸೋಮವಾರದಿಂದ ಶನಿವಾರದ ವರೆಗೆ ಕ್ರೈಸ್ತರು "ಒಬ್ಬರಿಗೊಬ್ಬರು ಪ್ರೋತ್ಸಾಹಿಸುತ್ತ; [ಕರ್ತನ ದಿನವು] ಸಮೀಪಿಸುವದನ್ನು ನೋಡುತ್ತಿರುವರು" (ಇಬ್ರಿಯ 10:25). ಪ್ರೀತಿಸುವ ಕ್ರೈಸ್ತರು ತಮ್ಮ ಸೃಷ್ಟಿಕರ್ತನನ್ನು ಮತ್ತು ರಕ್ಷಕನನ್ನು ಹಾಗೂ ಪರಿಶುದ್ಧಾತ್ಮನನ್ನು ಆರಾಧನೆಯಲ್ಲಿ ಕೊಂಡಾಡಲು ಮತ್ತು ಪರಸ್ಪರ ಭಕ್ತಿವೃದ್ಧಿ ಪಡಿಸಿಕೊಳ್ಳಲು ಆನಂದದ ಒಂದುಗೂಡಿಬರುವಿಕೆಯನ್ನು ಮುನ್ನೋಡುವರು (ಯೋಹಾನ 4:24; 1 ಥೆಸಲೊನೀಕ 5:11). " 'ನಾವು ಆರಾಧಿಸಲು ಹೋಗೋಣ!' ಎಂದು ಅವರು ನನಗೆ ಹೇಳಿದಾಗ ನನಗೆ ಆನಂದವಾಯಿತು" ಎಂದು ಹೇಳುವ ಕೀರ್ತನೆ 122:1ಕ್ಕೆ ಕ್ರೈಸ್ತರು ಹೊಂದಿಕೊಳ್ಳಬಹುದು. ಅವನಿಗೆ ಪರಲೋಕವು ಮಾಡಿದ್ದಕ್ಕೆ ಆಳವಾದ ಮೆಚ್ಚಿಕೆಯಿರುವುದು ಮತ್ತು ಅವನು ಅದನ್ನು ವ್ಯಕ್ತಪಡಿಸುವದಕ್ಕಾಗಿ ಒಂದು ಅಗತ್ಯತೆಯಿದೆ ಎಂದು ಭಾವಿಸುವನು:

> ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ
> ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ.
> ನನ್ನ ಮನಸ್ಸು ದೇವರಿಗಾಗಿ, ಚೈತನ್ಯ ಸ್ವರೂಪನಾದ ದೇವರಿಗಾಗಿ ಹಾರೈಸುತ್ತದೆ;
> ನಾನು ಯಾವಾಗ ಹೋಗಿ ದೇವರ ಸನ್ನಿಧಿಯಲ್ಲಿ ಸೇರುವೆನೋ?
> "ನಿನ್ನ ದೇವರು ಎಲ್ಲಿ?" ಎಂದು ಜನರು ಯಾವಾಗಲೂ ನನ್ನನ್ನು ಗೇಲಿ ಮಾಡುವದರಿಂದ
> ಹಗಲಿರುಳು ನನಗೆ ಕಣ್ಣೀರೇ ಆಹಾರವಾಯಿತು:
> ನಾನು ಭಜನೋತ್ಸವದಲ್ಲಿ ಸೇರಿ
> ಜನಸಮೂಹದೊಡನೆ ಹರ್ಷ ಧ್ವನಿಮಾಡುತ್ತಾ ಸ್ತೋತ್ರಪದಗಳನ್ನು ಹಾಡುತ್ತಾ
> ದೇವಾಲಯಕ್ಕೆ ಹೋಗುತ್ತಿದ್ದದ್ದನ್ನೇ ನೆನಪಿಗೆ ತಂದುಕೊಂಡು
> ನನ್ನೊಳಗೆ ನಾನೇ ಹಂಬಲಿಸುತ್ತಿರುವೆನು (ಕೀರ್ತನೆ 42:1-4).

© 2009 Truth for Today

## ಬಾಪ್ತಿಸ್ಮ: ಒಂದು ವಿಭಾಗಿಸುವ ಗೆರೆ

| ಬಾಪ್ತಿಸ್ಮದ ಮೊದಲು | | ಬಾಪ್ತಿಸ್ಮದ ನಂತರ |
|---|---|---|
| ಪಾಪಗಳ ಅಪರಾಧ | ಮತ್ತಾಯ 28:18-20; ಮಾರ್ಕ 16:15-18; ಲೂಕ 24:46-49 | ಪಾಪಗಳ ಪರಿಹಾರ |
| ರಕ್ಷಿಸಲ್ಪಡದೇ ಇರುವವರು | ಮಾರ್ಕ 16:16; 1 ಪೇತ್ರ 3:21 | ರಕ್ಷಿಸಲ್ಪಟ್ಟವರು |
| ಪಾಪಗಳು ತೊಳೆಯಲ್ಪಡದೇ ಇರುವುದು | ಅಪೊಸ್ತಲರ ಕೃತ್ಯಗಳು 22:16 | ಪಾಪಗಳು ತೊಳೆಯಲ್ಪಟ್ಟದ್ದು |
| ಪರಿಶುದ್ಧಾತ್ಮನ ವರವಿಲ್ಲ | ಯೋಹಾನ 14:17; ಅಪೊಸ್ತಲರ ಕೃತ್ಯಗಳು 2:38; 5:32; ಗಲಾತ್ಯ 4:6; ಎಫೆಸ 1:13, 14; | ಪರಿಶುದ್ಧಾತ್ಮ ವರ ನಮ್ಮ ಬಾಧ್ಯಸ್ಥಿಕೆಯ ಮುದ್ರೆ |
| ಸೈತಾನನ ಮಕ್ಕಳು | ಯೋಹಾನ 8:44; 2 ಕೊರಿಂಥ 6:16 | ದೇವರ ಮಕ್ಕಳು |
| ಕ್ರಿಸ್ತನಲ್ಲಿ ಅಲ್ಲ | ರೋಮಾಪುರ 6:3; ಗಲಾತ್ಯ 3:27 | ಕ್ರಿಸ್ತನಲ್ಲಿ |
| ದೇವರ ರಾಜ್ಯದಲ್ಲಿ ಅಲ್ಲ | ಯೋಹಾನ 3:5; ಕೊಲೊಸ್ಸೆ 1:13 | ದೇವರ ರಾಜ್ಯದಲ್ಲಿ |
| "ಒಂದೇ ದೇಹ" ಸಭೆಯಲ್ಲಿ ಅಲ್ಲ | 1 ಕೊರಿಂಥ 12:13; ಎಫೆಸ 1:22, 23 | "ಒಂದೇ ದೇಹ," ಸಭೆಯಲ್ಲಿ |
| ಎಲ್ಲಾ ಆತ್ಮಿಕ ಆಶೀರ್ವಾದ ಗಳು ಇಲ್ಲದವರು | ಎಫೆಸ 1:3 | ಎಲ್ಲಾ ಆತ್ಮಿಕ ಆಶೀರ್ವಾದ ವುಳ್ಳವರು |
| ಸಮೃದ್ಧ ಜೀವನ ಇಲ್ಲದವರು | ಯೋಹಾನ 10:10 | ಸಮೃದ್ಧ ಜೀವನವುಳ್ಳವರು |
| ಪರಲೋಕದಲ್ಲಿ ಬಾಧ್ಯತೆಯು ಇಡಲ್ಪಟ್ಟಿರದೇ ಇರುವವರು | 1 ಪೇತ್ರ 1:4 | ಪರಲೋಕದಲ್ಲಿ ಬಾಧ್ಯತೆಯು ಇಡಲ್ಪಟ್ಟಿರುವವರು |

© 2009 Truth for Today